**ಭಾರತೀಯ ರಿಸರ್ವ್ ಬ್ಯಾಂಕ್ ಫ್ಲೆರಟಿಕ್ ಸ್ಟೈನ್ಲೆಸ್ ಸ್ಟೀಲ್ ೨ ರೂಪಾಯಿ ನಾಣ್ಯಗಳನ್ನು ಚಾಲಾವಣೆಗೆ ಬಿಡುಗಡೆ ಮಾಡಲಿದೆ.**

ಡಿಸೆಂಬರ್ ೧೯, ೨೦೦೬

" ಅನೇಕತೆಗಳಲ್ಲಿ ಏಕತೆ" ವಿಷಯ ವಸ್ತುವನ್ನು ಹೊಂದಿದ ಫ್ಲೆರಟಿಕ್ ಸ್ಟೈನ್ಲೆಸ್ ಸ್ಟೀಲ್ ೨ ರೂಪಾಯಿ ನಾಣ್ಯಗಳನ್ನು ಅತಿ ಶೀಘ್ರದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಬಿಡುಗಡೆ ಮಾಡಲಿದೆ.

ಈ ನಾಣ್ಯಗಳು ಆಕಾರದಲ್ಲಿ ದುಂಡಾಗಿದ್ದು ೨೭ ಮಿ.ಮಿ.ವ್ಯಾಸವನ್ನು ಹೊಂದಿರುತ್ತದೆ ಮತ್ತು ಶೇಕಡಾ ೧ ರಷ್ಟು ಕ್ರೋಮಿಯಂ ಅಂಶವನ್ನು ಹಾಗು ಶೇಕಡಾ ೮೩ ರಷ್ಟು ಕಬ್ಬಿಣದ ಅಂಶವನ್ನು ಹೊಂದಿರುತ್ತದೆ.

ನಾಣ್ಯದ ಮುಖಭಾಗವನ್ನು ಮೂರು ಭಾಗಗಳನ್ನಾಗಿ ವಿಂಗಡಿಸಿದ್ದು ಮಧ್ಯ ಭಾಗದಲ್ಲಿ ಸಿಂಹಗಳ ತಲೆಗಳಿರುವ ಅಶೋಕ ಸ್ತಂಭವಿರುತ್ತದೆ. ಅದರ ಕೆಳಗೆ ಹಿಂದಿ ಭಾಷೆಯಲ್ಲಿ सत्यमेव जयते ಎಂದು ಬರೆದಿರುತ್ತದೆ. ನಾಣ್ಯದ ಮೌಲ್ಯವನ್ನು ಅಂತರರಾಷ್ಟ್ರೀಯ ಸಂಖ್ಯೆ ಎದ್ದು ಕಾಣುವಂತೆ ಬರೆದಿರಲಾಗಿರುತ್ತದೆ. ಮೇಲ್ಭಾಗದಲ್ಲಿ भारत ಎಂದು ಹಿಂದಿಯಲ್ಲಿ ಹಾಗೂ India ಎಂದು ಇಂಗ್ಲೀಷಿನಲ್ಲಿ ಬರೆದಿರುತ್ತದೆ. ಕೆಳಭಾಗದಲ್ಲಿ ವರ್ಷವನ್ನು ಅಂತರರಾಷ್ಟ್ರೀಯ ಸಂಖ್ಯೆಯಲ್ಲಿ ಬರೆದಿರುತ್ತದೆ. ನಾಣ್ಯದ ಹಿಂಭಾಗದಲ್ಲಿ, ನಮ್ಮ ದೇಶದ ವೈಶಿಷ್ಟ್ಯವನ್ನು ಪ್ರತಿಬಿಂಬಿಸುವ "ಅನೇಕತೆಗಳಲ್ಲಿ ಏಕತೆ" ವಿಷಯವನ್ನು ವಿಶಿಷ್ಟ ಶೈಲಿಯಲ್ಲಿ ಛಾಪಿಸಲಾಗಿದೆ. ಒಂದೇ ದೇಹವನ್ನು ನಾಲ್ಕು ತಲೆಗಳು ಹಂಚಿಕೊಂಡು, ನಮ್ಮ ದೇಶದ ನಾಲ್ಕೂ ನಿಟ್ಟಿನ ಜನರು ಒಂದೇ ಪತಾಕೆಯಡಿಯಲ್ಲಿ ಒಟ್ಟಾಗಿ ನಮ್ಮ ದೇಶಕ್ಕೆ ಸೇರಿದವರೆಂಬುದನ್ನು ಸಾಂಕೇತಿಕವಾಗಿ ಪ್ರತಿಬಿಂಬಿಸುತ್ತದೆ.

ಗೊತ್ತುಪಡಿಸಿದ ಮೌಲ್ಯವನ್ನು ನಾಣ್ಯ ನೋಡಿದ ಕೂಡಲೇ ಗುರುತಿಸಲು ಅನುವಾಗುವಂತೆ ದೃಷ್ಟಿ ಗೋಚರ ಸಂಕೇತವನ್ನು ಹೊಂದಿರುತ್ತದೆ. ಮೇಲ್ಭಾಗದ ಎಡ ಪಾರ್ಶ್ವದಲ್ಲಿ दो रुपये ಎಂದು ಹಿಂದಿಯಲ್ಲಿ ಮತ್ತು 2 Rupees ಎಂದು ಇಂಗ್ಲೀಷಿನಲ್ಲಿ ಬರೆದಿರಲಾಗುತ್ತದೆ.

ನಾಣ್ಯಗಳ ಅಧಿನಿಯಮ ೧೯೦೬ ರಲ್ಲಿ ತಿಳಿಸಿರುವಂತೆ ಈ ನಾಣ್ಯಗಳು ವಿಧಿಮಾನ್ಯ ಚಲಾವಣೆಗೆ ಬರುತ್ತವೆ. ಈಗಿರುವ ಎರಡು ರೂಪಾಯಿ ನಾಣ್ಯಗಳು ಸಹ ವಿಧಿಮಾನ್ಯ ಚಲಾವಣೆಯಲ್ಲಿ ಮುಂದುವರಿಯುತ್ತವೆ.

ಪಿ.ವಿ.ಸದಾನಂದನ್
ವ್ಯವಸ್ಥಾಪಕರು.